# ವಚನಗಳಲ್ಲಿ ಖಗೋಳ ವಿಜ್ಞಾನ

**ಸುಪ್ರಿಯಾ ಮಲಶೆಟ್ಟಿ**

ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಎಸ್.ಜೆ.ಎಂ.ವಿ.ಎಸ್. ಕಲಾ ಹಾಗೂ ವಾಣಿಜ್ಯ ಮಹಿಳಾ ಮಹಾವಿದ್ಯಾಲಯ, ಜೆ.ಸಿ. ನಗರ, ಹುಬ್ಬಳ್ಳಿ.

**Received: 10-06-2024 ; Acepted: 10-07-2024 ; Published: 11-08-2024**

**DOI: https://doi.org/10.5281/zenodo.13284072**

**ABSTRACT:**

ವಿಜ್ಞಾನ ಮತ್ತು ಆಧ್ಯಾತ್ಮಿಕತೆಯು ಒಂದೇ ಸತ್ಯವನ್ನು ಎರಡು ರೀತಿಯಲ್ಲಿ ಕಾಣುವುದು. ಬ್ರಹ್ಮಾಂಡ ಮತ್ತು ಪಿಂಡಾಂಡ, ಬಾಹ್ಯ ಜಗತ್ತು ಮತ್ತು ಆಂತರಿಕ ಜಗತ್ತು ಎಂಬ ಎರಡು ಜಗತ್ತುಗಳಿವೆ. ಅನುಭವದಿಂದ ಈ ಎರಡು ಕ್ಷೇತ್ರಗಳಿಂದಲೂ ನಮಗೆ ಸತ್ಯ ದೊರಕುವುದು. ಆಂತರಿಕ ಅನುಭವದಿಂದ ಸಂಗ್ರಹಿಸಿರುವುದೇ ಮನಶಾಸ್ತ್ರ , ತತ್ವಶಾಸ್ತ್ರ ಮತ್ತು ಧರ್ಮ. ಬಾಹ್ಯ ಜಗತ್ತಿನಿಂದ ನಮಗೆ ಭೌತವಿಜ್ಞಾನಗಳು ದೊರಕುವವು. ಪೂರ್ಣವಾದ ಸತ್ಯವು ಎರಡು ಕ್ಷೇತ್ರಗಳಿಂದ ಬರುವ ಅನುಭವಗಳಿಗೆ ವಿರೋಧವಿಲ್ಲದೆ ಇರಬೇಕು. ಪಿಂಡಾಂಡವು ಬ್ರಹ್ಮಾಂಡಕ್ಕೆ ಪ್ರಮಾಣವಾಗಿರಬೇಕು. ಸತ್ಯವು ಯಾವ ಕ್ಷೇತ್ರಕ್ಕೆ ಸೇರಿದ್ದರು ಪರಸ್ಪರ ವಿರೋಧಗಳಿರುವುದಿಲ್ಲ ಆಂತರಿಕ ಸತ್ಯಕ್ಕೂ ಬಾಹ್ಯ ಸತ್ಯಕ್ಕೂ ಪರಸ್ಪರ ವಿರೋಧವಿಲ್ಲ.

**KEYWORDS:**

ಖಗೋಳ ವಿಜ್ಞಾನ, ಭೌತ ವಿಜ್ಞಾನ, ಶೂನ್ಯ ಸಂಪಾದನೆ, ಭೌತಿಕ ವಿಶ್ವ , ಆಂತರಿಕ ವಿಶ್ವ.

ವಿಜ್ಞಾನ ತಂತ್ರಜ್ಞಾನಗಳು ನಮ್ಮ ಬದುಕಿಗೆ ತಳಹದಿಯಾಗಿವೆ. ವಚನಗಳು ಕೂಡ ನಮ್ಮ ಬದುಕಿಗೆ ಮಾರ್ಗದರ್ಶಿಗಳಾಗಿವೆ. ಆದ್ದರಿಂದ ಎರಡರ ತಾಯಿಬೇರು ನಮ್ಮ ಬದುಕೆ ಆಗಿದೆ. ಮನುಷ್ಯನು ಸಮಾಜಜೀವಿಯಾಗಬೇಕಾದರೆ ಧರ್ಮದ ನೆಲೆಗಟ್ಟು ಬೇಕು. ಅಕ್ಕಮಹಾದೇವಿಯವರು ಹೇಳಿದಂತೆ:

**ಲೋಕದ ಚೇಷ್ಟೆಗೆ ರವಿ ಬೀಜವಾದಂತೆ**
**ಕರಣಂಗಳ ಚೇಷ್ಟೆಗೆ ಮನವೇ ಬೀಜ**

ಈ ಮಾತಿನ ಹಿನ್ನೆಲೆಯಲ್ಲಿ ಒಂದು ಭೌತಿಕ ವಿಶ್ವ ಇನ್ನೊಂದು ಆಂತರಿಕ ವಿಶ್ವ , ಒಂದು ವಿಜ್ಞಾನ ಮತ್ತು ತಂತ್ರಜ್ಞಾನ, ಇನ್ನೊಂದು ಆಧ್ಯಾತ್ಮಿಕತೆ ಮತ್ತು ಧರ್ಮಶಾಸ್ತ್ರ ಇವೆರಡಕ್ಕೂ ಮೂಲ ಮನಸ್ಸು. ಧರ್ಮ ದರ್ಶನಗಳ ವೈವಿಧ್ಯ ತತ್ವಜ್ಞಾನದಲ್ಲಿ ಅಸ್ತಿತ್ವ ಶಾಸ್ತ್ರದಲ್ಲಿ ಹೇಳುವ ಮೂಲಭೂತ ಪ್ರಶ್ನೆಗಳು ಈ ರೀತಿಯಾಗಿ ನೋಡಬಹುದು:

1. ಅಸ್ತಿತ್ವವೆಂದರೇನು? ಅದರ ಸ್ವರೂಪವೇನು?

2. ಯಾವ ಯಾವ ಸಂಗತಿಗಳು ಅಸ್ತಿತ್ವದಲ್ಲಿವೆ?
3. ವಿಶ್ವವು ಅಖಂಡವೋ? ಅನೇಕಗಳ ಸಮೂಹವೋ?
4. ಅಸ್ತಿತ್ವದ ಮೂಲ ಲಕ್ಷಣಗಳೇನು?
5. ಕಾಲವೆಂದರೇನು?
6. ವಸ್ತು ಎಂದರೇನು?
7. ಸಂಬಂಧಗಳೆಂದರೇನು?
8. ಸತ್ಯ ಸಂಗತಿ ಎಂದರೇನು?
9. ಬದಲಾವಣೆ ಎಂದರೇನು?
10. ಕಾರಣವೆಂದರೇನು?

ಹೀಗೆ ಈ ಪಟ್ಟಿಯನ್ನು ಬೆಳೆಸುತ್ತಾ ಹೋದರೆ ನಮಗೆ ಅಸ್ತಿತ್ವ ಶಾಸ್ತ್ರದ ವಿಷಯ ವ್ಯಾಪ್ತಿ ಗೊತ್ತಾದೀತು. ವಿಶೇಷವೆಂದರೆ ಈ ಶಾಸ್ತ್ರವು ವಿಜ್ಞಾನಕ್ಕೆ ಎಷ್ಟು ಪ್ರಸ್ತುತವೋ ಅಷ್ಟು ಧರ್ಮಶಾಸ್ತ್ರಕ್ಕೆ ಕೂಡ. ಯಾವುದೇ ದೃಷ್ಟಿಯಿಂದ ನೋಡಿದರೂ ವಿಜ್ಞಾನ, ಧರ್ಮ ಮತ್ತು ಬದುಕನ್ನು ಸಾಮರಸ್ಯಗೊಳಿಸಬೇಕಾದರೆ (ಶರಣ ಸತಿ-ಲಿಂಗಪತಿ ಅರ್ಧನಾರೀಶ್ವರ) ವಿಶಿಷ್ಟವೇ ಪರಿಪೂರ್ಣ ಧರ್ಮ ವಿಜ್ಞಾನವಾಗುತ್ತದೆ. ಶಕ್ತಿಯೇ ನಮ್ಮ ಅಸ್ತಿತ್ವಕ್ಕೆ ಮೂಲ ಕಾರಣವಾಗಿದ್ದರಿಂದ ಇದನ್ನು ಶಕ್ತಿ ವಿಶಿಷ್ಟಾದ್ವೈತ ಎಂದು ವರ್ಣಿಸಬಹುದು. ಇದೇ ನಮಗೆ ಅತ್ಯಂತ ಪ್ರಸ್ತುತ ಶಾಸ್ತ್ರೀಯ ನಿಲುವು.

17 ಮತ್ತು 18ನೆಯ ಶತಮಾನದಿಂದೀಚೆಗೆ ಜಗತ್ತಿನಾದ್ಯಂತ ಸಾಮಾಜಿಕ ಚಿಂತನೆಯ ಹೊಸ ಹೊಸ ಆಯಾಮಗಳು ಆವಿಷ್ಕಾರಗೊಂಡವು. ಮನುಷ್ಯ ಬದುಕಿನ ಸನಾತನತೆಯ ಗರಿಮೆಯನ್ನು ಹೆಚ್ಚಿಸುವ ವೈಜ್ಞಾನಿಕ ಕ್ರಾಂತಿಯೇ ಆಯಿತು. ಆದರೆ ಈ ಎಲ್ಲ ಪಾಶ್ಚಿಮಾತ್ಯ ಚಿಂತನಾಕಾರರಿಗೆ ಬಸವ ವಿಚಾರಧಾರೆಯ ಸುಳಿವು ಸಿಕ್ಕಿದ್ದಾಗಿದ್ದರೆ ಅವರ ಚಿಂತನೆಯ ವೈಖರಿಯೇ ಬದಲಾಗಿ ಇನ್ನು ವಿಶಿಷ್ಟವಾದ ವಿಶ್ವ ಸಾಮಾಜಿಕ ವ್ಯವಸ್ಥೆ ನಿರ್ಮಾಣಗೊಳ್ಳುವುದರಲ್ಲಿ ಪರ್ಯಾವಸನಗೊಳ್ಳುತ್ತಿತ್ತು.

ವಿಜ್ಞಾನ ಮತ್ತು ಆಧ್ಯಾತ್ಮಿಕತೆಯು ಒಂದೇ ಸತ್ಯವನ್ನು ಎರಡು ರೀತಿಯಲ್ಲಿ ಕಾಣುವುದು. ಬ್ರಹ್ಮಾಂಡ ಮತ್ತು ಪಿಂಡಾಂಡ, ಬಾಹ್ಯ ಜಗತ್ತು ಮತ್ತು ಆಂತರಿಕ ಜಗತ್ತು ಎಂಬ ಎರಡು ಜಗತ್ತುಗಳಿವೆ. ಅನುಭವದಿಂದ ಈ ಎರಡು ಕ್ಷೇತ್ರಗಳಿಂದಲೂ ನಮಗೆ ಸತ್ಯ ದೊರಕುವುದು. ಆಂತರಿಕ ಅನುಭವದಿಂದ ಸಂಗ್ರಹಿಸಿರುವುದೇ ಮನಶಾಸ್ತ್ರ , ತತ್ವಶಾಸ್ತ್ರ ಮತ್ತು ಧರ್ಮ. ಬಾಹ್ಯ ಜಗತ್ತಿನಿಂದ ನಮಗೆ ಭೌತವಿಜ್ಞಾನಗಳು ದೊರಕುವವು. ಪೂರ್ಣವಾದ ಸತ್ಯವು ಎರಡು ಕ್ಷೇತ್ರಗಳಿಂದ ಬರುವ ಅನುಭವಗಳಿಗೆ ವಿರೋಧವಿಲ್ಲದೆ ಇರಬೇಕು. ಪಿಂಡಾಂಡವು ಬ್ರಹ್ಮಾಂಡಕ್ಕೆ ಪ್ರಮಾಣವಾಗಿರಬೇಕು. ಸತ್ಯವು ಯಾವ ಕ್ಷೇತ್ರಕ್ಕೆ ಸೇರಿದ್ದರು ಪರಸ್ಪರ ವಿರೋಧಗಳಿರುವುದಿಲ್ಲ. ಆಂತರಿಕ ಸತ್ಯಕ್ಕೂ ಬಾಹ್ಯ ಸತ್ಯಕ್ಕೂ ಪರಸ್ಪರ ವಿರೋಧವಿಲ್ಲ.

ವಚನಕಾರರು ತಾತ್ವಿಕ ಚಿಂತನೆಯಲ್ಲಿ ತೊಡಗಿ ತಮ್ಮ ಸುತ್ತಲಿರುವ ವಿಶ್ವದ ಬಗ್ಗೆ ಕುತೂಹಲಕಾರಿ ವಿಷಯಗಳನ್ನು ವಚನಗಳಲ್ಲಿ ಪ್ರಕಟಪಡಿಸಿದ್ದಾರೆ. ತಮ್ಮ ದಾರ್ಶನಿಕ, ಸೈದ್ಧಾಂತಿಕ ಶಕ್ತಿಯಿಂದ ತಮ್ಮದೇ ಆದ ಸಿದ್ಧಾಂತಗಳನ್ನು ಪ್ರತಿಪಾದಿಸಿದ್ದಾರೆ. ಅವರು ಇಂದಿನ ಅರ್ಥದಲ್ಲಿ ವಿಜ್ಞಾನಿಗಳು ಅಲ್ಲದಿದ್ದರೂ ತಮ್ಮ ಸುತ್ತಲಿನ ಪರಿಸರ ಜೀವರಾಶಿ ಪಂಚಭೂತಗಳನ್ನು ವೈಜ್ಞಾನಿಕ ದೃಷ್ಟಿಯಿಂದ ಪರಿಶೀಲಿಸಿದ್ದಾರೆ. ಕೆಲವು ವಚನಕಾರರನ್ನು ವಚನದ ಪ್ರಾರಂಭದಲ್ಲಿ ವಿಜ್ಞಾನ ಸಮ್ಮತ ವಿಚಾರಗಳನ್ನು ಹೇಳಿ ನಂತರ ಆಧ್ಯಾತ್ಮಿಕ ಧಾರ್ಮಿಕ ವಿಚಾರಕ್ಕೆ ಬಂದದ್ದು ಕಂಡು ಬರುತ್ತದೆ.

ಸೃಷ್ಟಿಪೂರ್ವ ಸ್ಥಿತಿಯನ್ನು ಸೂಚಿಸುವ ಅಲ್ಲಮಪ್ರಭುವಿನ ಒಂದು ವಚನ ಹೀಗಿದೆ:

**ಅಯ್ಯಾ ಜಲ ಕೂರ್ಮ ಗಜ ಫಣಿಯ ಮೇಲೆ**
**ಧರೆ ವಿಸ್ತರಿಸಿ ನಿಲ್ಲದಂದು ಗಗನವಿಲ್ಲದಂದು**
**ಪವನನ ಸುಳುಹಿಲ್ಲದಂದು ಅಗ್ನಿಗೆ ಕಳೆದೋರದಂದು**
**ಗಿರಿ ತೃಣ ಕಾಷ್ಟಾದಿಗಳಿಲ್ಲದಂದು**
**ಯುಗ ಜುಗ ಮಿಗಿಲೆನಿಸಿದ ಹದಿನಾಲ್ಕು ಭುವನ ನೆಲೆಗೊಳ್ಳದೊಂದು**
**ನಿಜವನರಿದಿಹನೆಂಬ ತ್ರಿ ಜಗದಧಿಪತಿಗಳಿಲ್ಲದಂದು,**
**ತೋರುವ ಬೀರುವ ಪರಿಭಾವದಲ್ಲಿ ಭರಿತ ಅಗಮ್ಯ ಗುಹೇಶ್ವರ ಲಿಂಗವು.**

ನಾವು ವಿಶ್ವದ ಉತ್ಪತ್ತಿಗೆ ಸಂಬಂಧಪಟ್ಟಂತೆ ಪ್ರಚಲಿತವಿರುವ ಖಗೋಳ ವಿಜ್ಞಾನದ ವಿವಿಧ ಸಿದ್ಧಾಂತಗಳ ಬಗ್ಗೆ ದೃಷ್ಟಿ ಬೀರಿದಾಗ ಎಡ್ವಿನ್ ಹಬ್ಸ್ ಪ್ರತಿಪಾದಿಸಿದ 'ಹಿಗ್ಗುತ್ತಿರುವ ವಿಶ್ವದ ಮಹಾಸ್ಫೋಟ ಸಿದ್ದಾಂತ' ನೆನಪಾಗುತ್ತದೆ. ಧರೆ ವಿಸ್ತರಿಸಿ ನಿಲ್ಲದಂದು ಗಗನವಿಲ್ಲದಂದು ಪವನನ ಸುಳುಹಿಲ್ಲದಂದು ಎಂಬ ಮಾತುಗಳು ಭೂಮಿ ರೂಪಗೊಳ್ಳದ ಮುಂಚಿನ ಕಾಲಕ್ಕೆ ಕರೆದೊಯ್ಯುತ್ತವೆ. ಅಗ್ನಿಗೆ ಕಳೆದೋರದೊಂದು ಎಂಬ ನುಡಿ Big-Bang Theoryಗೂ ಮುಂಚೆ ಕರೆದೊಯ್ಯುವುದು. ಭೂಮಿಯಲ್ಲಿ ಗಿರಿ, ಪರ್ವತ, ಸಸ್ಯ, ಪರಿಸರ, ಜೀವರಾಶಿ ರೂಪಗೊಳ್ಳುವ ಮುನ್ನ ನಮ್ಮ ಮನಸ್ಸು ವಿಹರಿಸುವಂತೆ ವಿಶ್ವದ ವಿರಾಟ್ ದರ್ಶನದಿಂದ ಆಶ್ಚರ್ಯ ಹೊಂದುತ್ತೇವೆ. ಈ ವಚನವು ಆಧುನಿಕ ವಿಜ್ಞಾನಿಗಳ ಮಹಾಸ್ಫೋಟ ಸಿದ್ಧಾಂತಕ್ಕೆ ಹತ್ತಿರವಾಗಿದೆ.

**ಅಯ್ಯಾ ತತ್ವ ವಿತತ್ವಗಳಿಲ್ಲದಂದು**
**ಪ್ರಕೃತಿ ಪುರುಷರಿಲ್ಲದಂದು, ಜೀವ ಪರಮರೆಂಬ ಭಾವ ತಲೆದೋರದಂದು**
**ಏನೂ ಇಲ್ಲದಂದು ಬಯಲು ಬಲಿದು ಬಿಂದುವಾಯಿತು ನೋಡಾ**
**ಆ ಬಿಂದು ಅಕ್ಷರತ್ರಯದ ಗದ್ದುಗೆಯಲ್ಲಿ ಕುಳ್ಳಿರಿಸಿ**
**ಓಂಕಾರ ಉತ್ಪತ್ತಿಯಾಯಿತು.**
**ಆ ನಾದ ಉತ್ಪತ್ತಿಯಾದಲ್ಲಿ ಮೂರ್ತಿಗೊಂಡರು ಶರಣರು.**
**ಆ ಶರಣನಿಂದಾಯಿತು ಪ್ರಕೃತಿ, ಆ ಪ್ರಕೃತಿಯಿಂದಾಯಿತ್ತು ಲೋಕ.**
**ಈ ಲೋಕ ಲೌಕಿಕವನತಿಗಳೆದು ನಿಜದಲ್ಲಿ ನಿವಾಸಿಯಾಗಿಪ್ಪ**
**ಗುಹೇಶ್ವರನ ಶರಣ ಚೆನ್ನಬಸವಣ್ಣನ ಘನವನು ಬಸವಣ್ಣನ**
**ಕೃಪೆಯಿಂದಲಾನರಿದು ನಮೋ ನಮೋ ಎನುತಿರ್ದೆನು.**

ಮೋಳಿಗೆ ಮಾರಯ್ಯನವರು ಈ ಕೆಳಗಿನ ವಚನದಲ್ಲಿ ಪಂಚಭೂತಗಳ ಮೊದಲು

ಬ್ರಹ್ಮಾಂಡ ಎಲ್ಲಿತ್ತು ಎಂದು ಪ್ರಶ್ನಿಸುತ್ತ :

**ಪೃಥ್ವಿ , ಅಪ್ಪು , ತೇಜ, ವಾಯು, ಆಕಾಶಂಗಳು**
**ತಲೆದೋರುವುದಕ್ಕೆ ಮುನ್ನವೇ........ ಬ್ರಹ್ಮಾಂಡವೆಲ್ಲಿ ಆಯಿತ್ತು?**
**ವಿಷ್ಣುವಿನ ಚೇತನ ಎಲ್ಲಿ ಹುಟ್ಟಿತು?**
**ಮಹಾರುದ್ರನ ದ್ವೇಷ ಎಲ್ಲಿ ಹುಟ್ಟಿ ಎಲ್ಲಿ ಅಡಗಿತ್ತು ಹೇಳಾ?**
**ನಾದ ಬಿಂದು ಕಳೆಗೆ ಅತೀತವಪ್ಪ**
**ಲಿಂಗವ ಭೇದಿಸಿ ವೇದಿಸಲರಿಯದೆ**
**ಭಾವದ ಭ್ರಮೆಯಿಂದಾಗಿ ನಾನಾ ಸಂದೇಹಕ್ಕೆ ಒಳಗಾಗಿ**
**ಜೀವ ಪರಮನ ನೆಲೆಯ ಕಂಡೆಹೆನೆಂದು**
**ಅದಾವ ಠಾವಿನಲ್ಲಿ ಕರ್ಕಶಗೊಂಬವಂಗೆ**
**ಪ್ರಾಣಲಿಂಗಿ ಎಂಬ ಭಾವ ಒಂದೂ ಇಲ್ಲ ನಿಃಕಳಂಕ ಮಲ್ಲಿಕಾರ್ಜುನ.**

ನಾದ ಬಿಂದು ಕಳೆಗೆ ಅತೀತವಾದ ಲಿಂಗವೇ ಮೂಲ ಎಂದು ಹಡಪದ ಅಪ್ಪಣ್ಣ ಬಸವಣ್ಣನವರ ಸಮಕಾಲಿನ ವಚನಕಾರ ಬಸವ ಅಭಿಮಾನದಿಂದ ಬಸವ ಪ್ರಿಯ ಕೂಡಲ ಚನ್ನಸಂಗಮದೇವ ಎಂಬ ಅಂಕಿತದೊಂದಿಗೆ ವಚನಗಳನ್ನು ಬರೆದಿದ್ದಾರೆ.

**ಆದಿ ಅನಾದಿ ಎಂಬವು ನಾದಕ್ಕೆ ಬಾರದ ಮುನ್ನ,**
**ಶೂನ್ಯ ನಿಶೂನ್ಯ ಸುರಾಳವೆಂಬುವು ಸುಳುಹುದೋರದ ಮುನ್ನ,**
**ಬೆಳಕು ಕತ್ತಲೆ ಇಲ್ಲದ ಮುನ್ನ,**
**ಪೃಥ್ವಿ ಅಪ್ಪು ತೇಜ ವಾಯು ಆಕಾಶ ಸೂರ್ಯ ಚಂದ್ರರು**
**ತಲೆದೋರದ ಮುನ್ನ, ದೇವನಿಲ್ಲದ ಭಕ್ತನಿಲ್ಲದ ಮುನ್ನ,**
**ನೀನು ನಾನು ಇಲ್ಲದ ಮುನ್ನ,**
**ಆಕಾರ ನಿರಾಕಾರವೇನು ಇಲ್ಲದ ಮುನ್ನ,**
**ತಾನು ತಾನೆಂಬ ತಲ್ಲಣವಿಲ್ಲದಂದು**
**ಆ ಬಟ್ಟ ಬಯಲು ಬ್ರಹ್ಮವೇ ಗಟ್ಟಿಯಾದ ಘನವೆಂತೆಂದೊಡೆ**
**ನಿಮ್ಮನುವೇ ನೀನರಿದ ಘನ ಮಹಿಮರು ತಿಳಿದು ನೋಡಿರಣ್ಣ**
**ಆ ಬಟ್ಟ ಬಯಲೆಂದಡಾರು? ಬಸವ; ಬಸವನೆಂದಡಾರು ಬಟ್ಟ ಬಯಲು.**

ತನ್ನ ಲೀಲೆಗಾಗಿ ಈ ಚೈತನ್ಯವೇ ಮಹಾಲಿಂಗವಾಯಿತು. ಆ ಮಹಾಲಿಂಗವೇ ಸದಾಶಿವಮೂರ್ತಿ. ಆ ಸದಾಶಿವಮೂರ್ತಿಯ ಪಂಚಮುಖಗಳಿಂದ ಪಂಚಭೂತಗಳು ಸೃಷ್ಟಿಯಾಯಿತು. ಭೂಮಿ ಸೇರಿದಂತೆ ಗ್ರಹಗಳಾದವು. ಭೂಮಿಯ ಮೇಲೆ ಚರಾಚರ ಜೀವಿಗಳು ಜನಿಸಿದವು. ಇದನ್ನೇ ನಾವು ವಿಜ್ಞಾನದ ಪ್ರಕಾರ ನೋಡಿದಾಗ ನಿರಾಕಾರ ವಸ್ತುವಿಗೆ ಚೈತನ್ಯ ಸೇರುವಿಕೆಯಿಂದ ಸೃಷ್ಟಿ ಉಂಟಾಯಿತು. ಅಂದರೆ ವಿಕಿರಣ ಶಕ್ತಿಯಿಂದ ಕೂಡಿದ ಆಕಾರರಹಿತ ಬಹುದೊಡ್ಡ ದ್ರವ್ಯವಸ್ತುವಿನ ಮಹಾಸ್ಫೋಟದಿಂದ ಜಗತ್ತು ಉಂಟಾಯಿತು.

**ಆಯಿತ್ತೆ ಉದಯಮಾನ ಹೋಯಿತ್ತೆ ಅಸ್ತಮಾನ,**
**ಅಳಿದವಲ್ಲ ನೀರಲಾವ ನಿರ್ಮಿತಂಗಳೆಲ್ಲವು ಕತ್ತಲೆ ಕವಿಯಿತ್ತು**
**ಮೂರು ಲೋಕದೊಳಗೆ ಇದರಚ್ಚುಗವೇನು ಹೇಳಾ ಗುಹೇಶ್ವರ?**

ಸೂರ್ಯ ಹುಟ್ಟುವ ಮುಳುಗುವ ನಡುವೆ ಪಂಚಮಹಾಭೂತಗಳಿಂದ ಸಕಲವೂ ಸೃಷ್ಟಿಯಾಗುತ್ತದೆ, ಸಕಲವೋ ಅಡಗುತ್ತದೆ. ಜೀವ ಜಾಲ ಹುಟ್ಟುತ್ತದೆ, ಬದುಕಿನಲ್ಲಿ ತಿರುಗುತ್ತದೆ, ಸಾಯುತ್ತದೆ. ಒಂದು ಕಾಲಕ್ಕೆ ಎಲ್ಲವೂ ನಾಶವಾಗುತ್ತದೆ. ಏನಿದರ ಮರ್ಮ ಏನಿದರ ರಹಸ್ಯ ಎಂದು ಕೇಳುತ್ತಾರೆ.

ಈ ಸೃಷ್ಟಿಯ ಉಗಮದ ಬಗ್ಗೆ ವಿಜ್ಞಾನಿಗಳು ತಾಳಿದ ನಿಲುವನ್ನೇ ಹೊಂದಿದೆ. ಸೃಷ್ಟಿಯಲ್ಲಿ ನಕ್ಷತ್ರಗಳು ಗ್ರಹಗಳು ಮತ್ತು ಗ್ರಹಗಳ ಮೇಲೆ ಜೀವಿಗಳ ಉಗಮದ ಕುರಿತು ಚಿಂತಿಸಿದ ಅಲ್ಲಮರ ವಚನ ಈ ರೀತಿಯಾಗಿದೆ.

**ಅನಾದಿಯ ಮಗ ಆದಿ ಆದಿಯ ಮಗನತೀತ**
**ಅತೀತನ ಮಗ ಆಕಾಶ ಆಕಾಶನ ಮಗನು ವಾಯು**
**ವಾಯುವಿನ ಮಗ ಅಗ್ನಿ ಅಗ್ನಿಯ ಮಗ ಅಪ್ಪು**
**ಅಪ್ಪುವಿನ ಮಗ ಪೃಥ್ವಿ ಪೃಥ್ವಿಯಿಂದ**
**ಸಕಲ ಜೀವರೆಲ್ಲರು ಉದ್ಭವ ಗುಹೇಶ್ವರಾ.**

ಈ ವಚನದಲ್ಲಿ ಸೃಷ್ಟಿಯ ಪ್ರಾರಂಭದಿಂದ ಪೃಥ್ವಿಯ ಮೇಲಿನ ಜೀವಿಗಳ ಉಗಮದ ಬಗ್ಗೆ ವೈಜ್ಞಾನಿಕವಾಗಿ ಚಿಂತಿಸಿದ್ದಾರೆ.

ಹೀಗೆ ಶೂನ್ಯದಿಂದ ಉದಯಿಸಿದ ಪಂಚಮಹಾಭೂತಗಳು ಮತ್ತು ಜಗತ್ತಿನ ಜೀವರಾಶಿಗಳೆಲ್ಲ ನಮ್ಮ ಬಂಧು ಬಳಗವೇ ಆಗಿದೆ ಎಂಬ ಸತ್ಯವನ್ನು ತಿಳಿಸುತ್ತಾರೆ. ಎಲ್ಲವೂ ಶೂನ್ಯದಲ್ಲಿ ಎಂಬುದನ್ನು ವಿಜ್ಞಾನಿಗಳು ಸಹ ಒಪ್ಪುತ್ತಾರೆ.

**ವಾಯುವಾಧಾರದ ಪವನ ಸಂಯೋಗ**
**ಅನಾಹತ ಚಕ್ರದಿಂದ ಮೇಲಣ ಆಜ್ಞಾ ಚಕ್ರದಲ್ಲಿ ನಿಂದು;**
**ಅನಂತ ಕೋಟಿಬ್ರಹ್ಮಾಂಡಗಳ ಮೆಟ್ಟಿ**
**ಕಾಯದ ಕಣ್ಣ ಮುಚ್ಚಿ, ಜ್ಞಾನದ ಕಣ್ಣು ತೆರೆದು ನೋಡಲ್ಕೆ**
**ಅಲ್ಲಿ ಒಂದು ನಿಶ್ಶೂನ್ಯವುಂಟು.**
**ಆ ನಿಶ್ಶೂನ್ಯದಲ್ಲಿ ನಿಂದು ನಿಶ್ಚಯಿಸಿ ನೋಡಲ್ಕೆ**
**ಕತ್ತಲೆಯಲ್ಲ ಬೆಳಗಲ್ಲ ಬಚ್ಚ ಬರಿಯ ಬಯಲು ಗುಹೇಶ್ವರಾ.**

ಅಲ್ಲಮ ಪ್ರಭು ಕಂಡ ಅನಂತ ಕೋಟಿ ಬ್ರಹ್ಮಾಂಡಗಳು ನಮಗೆ ಆಶ್ಚರ್ಯವನ್ನುಂಟು ಮಾಡುತ್ತವೆ. ನಮ್ಮ ನಿಹಾರಿಕೆ (ಗ್ಯಾಲಕ್ಸಿ)ಯಂಥವು ಸುಮಾರು ಒಂದು ಸಾವಿರ ಕೋಟಿ ಸಂಖ್ಯೆಯಲ್ಲಿರಬಹುದು ಎಂದು ಒಂದು ಲೆಕ್ಕಾಚಾರ. ಅಗಾಧವಾದ ವಿಶ್ವದ ಸ್ವರೂಪವನ್ನು ಇನ್ನೂ ತಿಳಿದುಕೊಳ್ಳಬೇಕು ಆಗ ಅಲ್ಲಮರ ಮಾತು ಮಹತ್ವಪೂರ್ಣವೆನಿಸುತ್ತದೆ.

ಈ ಲೋಕದ ಉತ್ಪತ್ತಿಗೆ ಕಾರಣವಾದ ಆ ದೇವರ (ಶಕ್ತಿಯ) ಬಗ್ಗೆ ವೈಜ್ಞಾನಿಕವಾಗಿ ಚಿಂತಿಸಿದ ವಚನವು ಹೀಗಿದೆ.

**ಅಯ್ಯ ತತ್ವ ವಿತತ್ವಗಳಿಲ್ಲದಂದು, ಪ್ರಕೃತಿ ಪುರುಷರಿಲ್ಲದಂದು,**
**ಜೀವ ಪರಮರೆಂಬ ಭಾವ ತಲೆದೋರದಂದು,**
**ಏನೂ ಏನೂ ಇಲ್ಲದಂದು**

**ಬಯಲು ಬಲಿದು ಒಂದು ಬಿಂದುವಾಯಿತ್ತು ನೋಡಾ,**
**ಆ ಬಿಂದು ಅಕ್ಷರತ್ರಯದ ಗದ್ದುಗೆಯಲ್ಲಿ ಕುಳ್ಳಿರಲು,**
**ಓಂಕಾರ ಉತ್ಪತ್ತಿಯಾಯಿತು.**
**ಆ ಓಂಕಾರ ನಾದದಲ್ಲಿ ಮೂರ್ತಿಗೊಂಡನೊಬ್ಬ ಶರಣ,**
**ಆ ಶರಣನಿಂದಾಯಿತ್ತು ಪ್ರಕೃತಿ,**
**ಆ ಪ್ರಕೃತಿಯಿಂದಾಯಿತ್ತು ಲೋಕ,**
**ಈ ಲೋಕ ಲೌಕಿಕವನತಿಗಳೆದು ನಿಜದಲ್ಲಿ ನಿವಾಸಿಯಾಗಿಪ್ಪ**
**ಗುಹೇಶ್ವರನ ಶರಣ ಚೆನ್ನಬಸವಣ್ಣನ ಘನವನು**
**ಬಸವಣ್ಣನ ಕೃಪೆಯಿಂದರಿದು ನಮೋ ನಮೋ ಎನ್ನುತಿರ್ದೆನು.**

ಈ ವಚನದಲ್ಲಿ ಏನೂ ಇಲ್ಲದ ಬಯಲಲ್ಲಿ ಒಂದು ಬಿಂದುವಾಯಿತು ಎಂದು ಹೇಳುವ ಮೂಲಕ ಅಲ್ಲಮರು ಆದಿಮೂಲ ಪರಮಾಣುವಿನ ಬಗ್ಗೆ ತಿಳಿಸಿದ್ದಾರೆ. ಬಿಂದು ಎಂಬಲ್ಲಿ ಅತ್ಯಂತ ಪುಟ್ಟ ಕಣ ಹುಟ್ಟಿದ ಬಗ್ಗೆ ನಿಖರವಾಗಿ ತಿಳಿಸಿದ್ದಾರೆ. ಮುಂದೆ ಆ ಬಿಂದು ಅಕ್ಷರತ್ರಯದ ಗದ್ದುಗೆಯಲ್ಲಿ ಕುಳ್ಳಿರಲು ಎಂಬಲ್ಲಿ ಉಷ್ಣಾಂಶದ ಏರಿಕೆಯಲ್ಲಿ ತೋರಿಸಿದ್ದಾರೆ. ಮುಂದುವರೆದು ಓಂಕಾರ ಉತ್ಪತ್ತಿಯಾಗಿತ್ತು ಎಂಬಲ್ಲಿ ಮಹಾಸ್ಫೋಟ ಸಂಭವಿಸಿದಾಗ ಹೊರಹೊಮ್ಮಿದ ಶಬ್ದವಾದ ಓಂಕಾರದ ಕುರಿತು ತಿಳಿಸಿದ್ದಾರೆ. ಈಗಲೂ ಸಹ ವ್ಯೋಮದಲ್ಲಿ ನಾಸಾದ ಗಗನಯಾತ್ರಿಗಳು ಓಂಕಾರದ ನಾದವನ್ನು ಕೇಳಿದ ಬಗ್ಗೆ ತಿಳಿಸಿದ್ದಾರೆ. ಒಟ್ಟಾರೆಯಾಗಿ ನಮ್ಮ ವಚನಕಾರರು ವ್ಯೋಮದಲ್ಲಿ ನಡೆದ ಸೃಷ್ಟಿಯ ಪ್ರಾರಂಭಿಕ ಘಟ್ಟವನ್ನು ವೈಜ್ಞಾನಿಕವಾಗಿ 12 ನೆಯ ಶತಮಾನದಲ್ಲಿಯೇ ತಿಳಿಸಿದ್ದಾರೆ.

**ಚಿದ್ ಬ್ರಹ್ಮಾಂಡವೆಂಬ ಭಾಂಡದಲ್ಲಿ**
**ಅನಂತ ವಿಚಿತ್ರ ಭುವನಂಗಳು ಅಡಗಿರ್ಪವಯ್ಯ**
**ಅನಂತ ಕೋಟಿ ಬ್ರಹ್ಮಾಂಡಗಳು**
**ನಿಮ್ಮ ರೋಮ ಕೂಪದಲ್ಲಿ ಅಡಗಿರ್ಬವೆಂದರೆ**
**ಬ್ರಹ್ಮ ವಿಷ್ಣು ಸದಾಶಿವ ಇವರು ಒಂದು ಬ್ರಹ್ಮಾಂಡದ ಬಾಲಕರು**
**ಇವರೆತ್ತ ಬಲ್ಲರು ಲಿಂಗದ ನಿಜವ ಅಪ್ರಮಾಣ ಅಗೋಚರ**
**ಮಹಾಂತ ನಿಮ್ಮ ನಿಜದೊಳಗನಾರು ಬಲ್ಲರಯ್ಯ ಸೌರಾಷ್ಟ್ರ ಸೋಮೇಶ್ವರ**

**ನಾಲ್ಕು ಯುಗವು ಕೂಡಿ ಇಪ್ಪತ್ತೊಂದು ವೇಳೆ ತಿರುಗಿದಡೆ**
**ಇಂದ್ರಂಗೆ ಮರಣ, ಬ್ರಹ್ಮಂಗೆ ಒಂದು ದಿನ**
**ಅಂತ ಬ್ರಹ್ಮರು ಸಹಸ್ರ ಕೂಡಿದರೆ ವಿಷ್ಣುವಿಂಗೆ ಪರಮಾಯು**
**ಅಂತ ವಿಷ್ಣು ಕೋಟಿ ಕೂಡಿದಡೆ ರುದ್ರಂಗೆ ಒಂದು ಜಾವ,**
**ಅಂತ ರುದ್ರರು ಏಕದಶ ಕೋಟಿ ಕೂಡಿದಡೆ ಈಶ್ವರಂಗೆ ಎರಡು ಜಾವ**
**ಅಂತ ಈಶ್ವರರು ಕೂಡಿದರೆ ಸದಾಶಿವಂಗೆ ಒಂದು ಜಾವ**
**ಅಂತ ಸದಾಶಿವರು ಒಂದು ಕೋಟಿ ಕೂಡಿದರೆ ಮಹಾ ಪ್ರಳಯಹುದು**
**ಅಂತ ಪ್ರಳಯ ಹದಿನೆಂಟು ಕೂಡಿದಡೆ ಮಹಾ ಅಂಧಕಾರವಹುದು**
**ಅಂತ ಅಂಧಕಾರ ಸಂದಿಲ್ಲದೆ ತಿರುಗುವಲ್ಲಿ ಬಯಲು ಬರಿದಿಹುದು**
**ಅಲ್ಲಿಂದಾಚೆ ನೀವೇ ಬಲ್ಲರಿ ನಾನರಿಯೆ**
**ಸೊಲ್ಲಿಂಗತೀತನಪ್ರಮಾಣನಗೋಚರ ಘನವು ನಿಃಕಳಂಕ ಮಲ್ಲಿಕಾರ್ಜುನ.**

**ಆದಿ ಸ್ವಯಂಭುವಿಲ್ಲದ ಮುನ್ನ ಸಂಘ ನಿಃಸಂಗವಿಲ್ಲದ ಮುನ್ನ**
**ನಕ್ಷತ್ರ ನವಗ್ರಹಂಗಳಿಲ್ಲದ ಮುನ್ನ ಖೇಚರ ಭೂಚರವಿಲ್ಲದ ಮುನ್ನ**
**ಆರಾರೂ ಇಲ್ಲದ ಮುನ್ನ ಆಕಾಶ ಮಾರುತರಿಲ್ಲದ ಮುನ್ನ**
**ಹರಿ ಬ್ರಹ್ಮಾದಿಗಳಾರ ನಿಲವಿಲ್ಲದ ಮುನ್ನ**
**ಹಿಂದಿಲ್ಲ ಮುಂದಿಲ್ಲ ಒಂದು ಇಲ್ಲದ ಮುನ್ನ**
**ಗುಹೇಶ್ವರನಿರ್ದ ತನ್ನ ತಾನರಿಯದಂತೆ.**

**ಘನಗಂಭೀರ ಮಹಾವರಿದಿಯಲ್ಲಿ**
**ನೊರೆ ತೆರೆ ಉದ್ಭವ ಘನ ತರಂಗಗಳು ತಲೆದೋರಿತಲ್ಲ**
**ಎಂದರೆ ಅವು ಬೇರೆ ಆಗಬಲ್ಲವೇ ಹರಶಿವನ ಅಂಬುದಿಯಲ್ಲಿ**
**ಸಕಲ ಬ್ರಹ್ಮಾಂಡಗಳಾದವಲ್ಲದೆ ಬೇರಾಗಬಲ್ಲವೆ?**
**ಇದ ಬೇರೆಂಬ ಅರೆ ಮರುಳರ ನಾನೇನೆಂಬೆ**
**ವಿಶ್ವವ ತಿಳಿದು ನೋಡಲು ಸಿಮ್ಮಲ್ಲಿಗೆಯ ಚೆನ್ನರಾಮನೆಂಬ ಲಿಂಗವು ತಾನೆ**

ವಿಶ್ವದಲ್ಲಿಯ ಎಲ್ಲಾ ಆಕಾಶ ಕಾಯಗಳು ಸಮುದ್ರದಲ್ಲಿಯ ತೆರೆಗಳಂತೆ ವಿಸ್ತಾರವಾಗಿ ಹರಡಿವೆ ಅವುಗಳಲ್ಲಿ ಸಮುದ್ರದಲ್ಲಿಯ ತೆರೆಗಳು ಸಮುದ್ರದಿಂದ ಹೇಗೆ ಭಿನ್ನವಾಗಲು ಸಾಧ್ಯವಿಲ್ಲವೋ ಹಾಗೆ ಬ್ರಹ್ಮಾಂಡದಲ್ಲಿಯ ಎಲ್ಲಾ ಆಕಾಶಕಾಯಗಳು ಬ್ರಹ್ಮಾಂಡದಿಂದ ದೂರವಾಗಿರಲು ಸಾಧ್ಯವಾಗದು. ಒಂದು ಅಗೋಚರ ಶಕ್ತಿ ಇವುಗಳನ್ನೆಲ್ಲ ಹಿಡಿದಿಕ್ಕಿದೆ ಎಂಬ ಜಾಗತಿಕ ಶಕ್ತಿಯ ಪರಿಚಯ ನೀಡಿದ್ದಾರೆ.

## ಪರಾಮರ್ಶನ ಗ್ರಂಥಗಳು


11. ಹಿರೇಮಠ ಆರ್. ಸಿ. & ಸುಂಕಾಪುರ ಎಂ. ಎಸ್. (ಸಂ). (1976). ಅಲ್ಲಮ ಪ್ರಭುದೇವರ ವಚನಗಳು. ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ. ಧಾರವಾಡ.
12. ಮಲ್ಲಾಪುರ್ ಬಿ. ವಿ. (ಸಂ). (2001). ಅಲ್ಲಮ ಪ್ರಭುದೇವರ ವಚನ ಸಂಪುಟ. ಕನ್ನಡ ಪುಸ್ತಕ ಪ್ರಾಧಿಕಾರ. ಬೆಂಗಳೂರು.
13. ಗೋರೂರು ಚೆನ್ನಬಸಪ್ಪ. (1992). ವಚನ ಚಿಂತನ. ಶ್ರೀ ಸರ್ಪಭೂಷಣ ಶಿವಯೋಗೀಶ್ವರ ಮಠ. ಬೆಂಗಳೂರು.
14. ನಾರಾಯಣ ಪಿ. ವಿ. (1994). ವಚನ ಪರಿಸರ. ತಂಗಾಳಿ. ಬೆಂಗಳೂರು.
15. ಶ್ರೀನಿವಾಸಮೂರ್ತಿ ಎಂ. ಆರ್. (1947). ವಚನಧರ್ಮ ಸಾರ. ಮೈಸೂರು ವಿಶ್ವವಿದ್ಯಾನಿಲಯ. ಮೈಸೂರು.
16. ವೀರಣ್ಣ ರಾಜೂರ. (1994). ವಚನ ಅಧ್ಯಯನ. ಜಗದ್ಗುರು ಅನ್ನದಾನೀಶ್ವರ ಸಂಸ್ಥಾನಮಠ. ಮುಂಡರಿಗೆ.
17. ವಿಸಾಜಿ ಜೆ. ಬಿ. (2008). ವಚನ ಸಂಪದ. ಶ್ರೀ ಚನ್ನಬಸವೇಶ್ವರ ಸಂಸ್ಥಾನ ಹಿರೇಮಠ ಸುಕ್ಷೇತ್ರ. ಹಾರಕೊಡು.
18. ತಿಪ್ಪೇರುದ್ರಸ್ವಾಮಿ ಹೆಚ್. (1977). ಸಾಹಿತ್ಯ: ವೈಚಾರಿಕ ಅಧ್ಯಯನ. ಕರ್ನಾಟಕ ವಿಶ್ವವಿದ್ಯಾಲಯ. ಧಾರವಾಡ.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.